ಅನಿರೀಕ್ಷಿತವಾಗಿ ಸೆಮ್ ಎಷ್ಟೋ ವರ್ಷಗಳ ಹಿಂದೆ ತಾನೆ ತೋಡಿದ ಬಾವಿಗೆ ಬೀಳುವುದು ಇತ್ಯಾದಿ ಹಲವು ಸಂಗತಿಗಳು ಕಾದಂಬರಿಯ ಕೊನೆಯಲ್ಲಿ ಸ್ಫೋಟವಾಗುತ್ತವೆ.

ಟರ್ಕಿ ದೇಶದ ಅದರಲ್ಲಿಯೂ ಇಸ್ತಾಂಬುಲ್ ನಗರದ ಈ ಕಾಲದ ದಂದುಗ–ತಲ್ಲಣಗಳನ್ನು ಆ ದೇಶದ ಇತಿಹಾಸ, ಸಂಸ್ಕೃತಿ ಮತ್ತು ಪಾಶ್ಚಾತ್ಯೀಕರಣದ ದುಷ್ಟ ಪರಿಣಾಮಗಳ ಜೊತೆಗೆ ಹೆಣೆಯುತ್ತಲೇ ಮನುಷ್ಯಸಂಬಂಧಗಳ ಆಳಗಳನ್ನು ಅರಸುವುದು ಪಾಮುಕ್ ಕಾದಂಬರಿಗಳ ಲಕ್ಷಣ. ಇಲ್ಲಿಯೂ ಸೆಮ್ ಬಾವಿ ತೋಡುತ್ತಿದ್ದ ಪ್ರದೇಶವು ತನ್ನ ಹಳೆಯ ಆತ್ಮೀಯ ಚಹರೆಗಳನ್ನು ಕಳೆದುಕೊಂಡು ನಾಗರಿಕ ವಿಕೃತಿಗಳನ್ನು ಪಡೆದುಕೊಳ್ಳುತ್ತಿರುವ ಬಗೆಯು ಹಲವು ವಿವರಗಳಲ್ಲಿ ಮೂಡಿಬಂದಿದೆ. ಅಂತೆಯೇ ಅದು ಮನುಷ್ಯನ ಅಂತರಂಗದಲ್ಲಿ ಮೂಡಿಸುವ ವಿಕೃತಿಗಳು ಚಿತ್ರಿತವಾಗಿವೆ.

ಇಂಥ ಹಂದರದ ಕಾದಂಬರಿಯ ಮೂಲದಲ್ಲಿ ತಂದೆ ಮತ್ತು ತಂದೆಯ ಹೊರತಾಗಿ ಬಾಲ್ಯವನ್ನು ಕಳೆಯುವ ಮಗನ ಸಂಬಂಧದ ಸಂಘರ್ಷವಿದೆ. ತಾಯಿಯೊಂದಿಗೆ ಮಲಗುವ ಈಡಿಪಸ್ ಮತ್ತು ತನ್ನ ಮಗನೆಂದು ತಿಳಿಯದೆ ಸೊಹ್ರಬ್‌ನನ್ನು ಯುದ್ಧದಲ್ಲಿ ಕೊಲ್ಲುವ ರುಸ್ತುಮ್‌ರ ಕಥೆಯನ್ನು ಹಲವು ಸ್ತರಗಳಲ್ಲಿ ವಿಶ್ಲೇಷಣೆಗೆ ಒಳಪಡಿಸುತ್ತ ಸಂಬಂಧಗಳ ಸ್ವರೂಪವನ್ನು ಕಾದಂಬರಿಕಾರ ಬಿಡಿಸುತ್ತಾನೆ. ಈ ಸಂಬಂಧಗಳ ದೀರ್ಘ ವಿಶ್ಲೇಷಣೆಯಿಂದಲೇ ಕಾದಂಬರಿ ಭಾರವೆನ್ನಿಸಿದರೂ ಅದು ಕಾದಂಬರಿಯ ತಾತ್ವಿಕ ಕೇಂದ್ರ. ಆದರೆ ಕಾದಂಬರಿಯ ಹೊಸತನವು ನಮ್ಮ ಅನುಭವಕ್ಕೆ ಬರುವುದು ಶತಮಾನಗಳಿಂದ ಮೂಕವಾಗಿರುವ ಹೆಣ್ಣುಧ್ವನಿಗೆ ಜೀವ ತುಂಬುವುದರೊಂದಿಗೆ. ಈವರೆಗೆ ನಾವು ಓದಿರುವ ಈಡಿಪಸ್ ಮತ್ತು ಸೊಹ್ರಬ್–ರುಸ್ತುಮ್ ಕತೆಗಳಲ್ಲಿ ಹಿನ್ನೆಲೆಗೆ ಸರಿದಿರುವ ಅಥವಾ ಕಂಡೂ ಕಾಣದಂತಿರುವ ಅಥವಾ ಮೂಕ(ಮ್ಯೂಟ್)ವಾಗಿರುವ ಒಂದು ಅಂಶವಿದೆ, ಅದೆಂದರೆ, ಎರಡೂ ಕತೆಗಳ ಹೆಣ್ಣುಧ್ವನಿ. ನಾಟಕದ ಕಡೆಯ ದೃಶ್ಯದಲ್ಲಿನ ಕೆಂಪುಮುಡಿಯ ಹೆಣ್ಣಿನ ಸ್ವಗತದ ಕವಿತೆ ಮತ್ತು ಕಾದಂಬರಿಯ ಕಡೆಯಲ್ಲಿರುವ 'ಕೆಂಪುಮುಡಿಯ ಹೆಣ್ಣು' ಭಾಗದ ಸ್ವಗತಗಳ ಮೂಲಕ ಈ ಕಾದಂಬರಿಯು ಹೆಣ್ಣುಧ್ವನಿಗೆ ಜೀವ ನೀಡಿದೆ. ಈ ಆಯಾಮವೇ ಕಾದಂಬರಿಯ ಬಂಧವನ್ನು ಪೂರ್ಣಗೊಳಿಸುತ್ತ, ನಡುವಿನ ಕಥೆಯೊಳಗೆ ಏಳುವ ಪ್ರಶ್ನೆಗಳು ಕಾದಂಬರಿಯ ಕಥನಕ್ರಮವನ್ನು ನಿರ್ಧರಿಸುತ್ತವೆ.

ಅಪರೂಪವಾಗಿ ಕಾಣಿಸಿಕೊಂಡರೂ 'ಕೆಂಪುಮುಡಿಯ ಹೆಣ್ಣು' ಈ ಕಾದಂಬರಿಯ ಕೇಂದ್ರಬಿಂದು. ಅವಳು ಒಂದು 'ದೃಷ್ಟಿಕೋನ'ವೂ ಹೌದು. ಮೂವರು ಗಂಡಸರನ್ನು ಒಟ್ಟಿಗೆ ಕಟ್ಟಿಹಿಡಿದರೂ ಕೊನೆಗೆ ಅವಳ ಗಮನ ಮಗನ ಪಾಲನೆಯ ಕಡೆಗೇ ಇರುತ್ತದೆ. ಅವಳು ಅಭಿನಯಿಸುವ ನಾಟಕದಲ್ಲಿ ಆಡುವ ಮಾತುಗಳು ವಿಶಿಷ್ಟವಾದ ಹೆಣ್ಣುದನಿಯನ್ನು ಪ್ರತಿನಿಧಿಸುತ್ತದೆ. ಅಂತೆಯೇ ಅವಳು ಮಾಡಿಕೊಳ್ಳುವ ಆಯ್ಕೆಗಳೂ ಹೆಣ್ಣು ಜೀವದ ಅದಮ್ಯ ಶಕ್ತಿಯ ಪ್ರತೀಕ. ಹೆಣ್ಣನ್ನು ಬಂಧಿಸುವ ಗಂಡು ಪ್ರಯತ್ನಗಳು ಅವಳೆದುರು ಕ್ಷುಲ್ಲಕ.

ಪಿತೃಪ್ರಧಾನವಾದ ಸಮಾಜಗಳಲ್ಲಿ ತಂದೆ, ತಾಯಿ ಮತ್ತು ಮಕ್ಕಳ ನಡುವಿನ ಸಂಬಂಧದ ಸೂಕ್ಷ್ಮಗಳು ಹಲವು ಬಗೆಯಲ್ಲಿ ಶೋಧಿತವಾಗುತ್ತವೆ. ಪಾಶ್ಚಾತ್ಯ ನಾಗರಿಕತೆಯು ಈಡಿಪಸ್, ಬ್ರದರ್ಸ್ ಕರಮಜೋವ್, ಸನ್ಸ್ ಅಂಡ್ ಲವರ್ಸ್ ಮುಂತಾದ ಮಹಾ ಕಾದಂಬರಿಗಳಲ್ಲಿ ಇಂತಹ ಹುಡುಕಾಟವನ್ನು ನಡೆಸಿದೆ. ಆದರೆ ಈ ಆಶಯವನ್ನು ಪೌರ್ವಾತ್ಯ ಸಂಸ್ಕೃತಿಯು ಭಿನ್ನವಾಗಿ ನೋಡಿದೆ. ಅಲ್ಲಿ ತಂದೆ ಸತ್ತು ಮಗ ಬದುಕಿದರೆ, ಇಲ್ಲಿ ಮಗ (ಸೊಹ್ರಾಬ್) ಸತ್ತು ತಂದೆ (ರುಸ್ತುಂ) ಬದುಕುತ್ತಾನೆ. ಪಾಮುಕ್ ಕಾದಂಬರಿಯಲ್ಲಿ ಇದು ಹೊಸ ತಿರುವುಗಳನ್ನು